to me. I have a large number of children and I am educating them. Some of them could not go to colleges because of my difficulties. Two or 3 of them are going to college. Let the students come to me and I will listen to them and I will take the matter before my collegues and if any sympathy is required, we will do the needful.

MYSORE IRRIGATION BILL, 1963.

(Motion to consider)

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೇ, ನೀರಾವರಿಗೆ ಸಂಬಂಧಪಟ್ಟ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆಂದು ತಿಳಿದು ಬಹಳ ಸಂತೋಷಪಟ್ಟೆ. ಇದರಲ್ಲಿ ಅನೇಕ ವಿಷಯಗಳನ್ನು ಬಿಟ್ಟಿದ್ದಾರೆ. ಅನೇಕ ಪ್ರದೇಶಗಳಿಗೆ ಈಗಿನ ಮಸೂದೆಯಿಂದ ತೊಂದರೆಯಾಗುತ್ತದೆ. ಇದರಲ್ಲಿ ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಎಂದರೆ 50-60 ಅಂಗುಲಗಳಿಗಿಂತ ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಮತ್ತು ಕಡಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚಿನ ಸೌಲಭ್ಯ ಕೊಡುವ ರೀತಿಯಲ್ಲಿ ಯಾವ ವಿಷಯವೂ ಅಡಕವಾಗಿಲ್ಲ.

ಈಗ ಕೋಲಾರ, ತುಮಕೂರು ಇಂಥ ಅನೇಕ ಪ್ರದೇಶಗಳಲ್ಲಿ ಮಳೆ ಬಹಳ ವಿರಳ. ಅದು ಅಲ್ಲಿಯ ಜನಗಳಿಗೆ ಅಪರೂಪವಾದ ವಸ್ತುವಾಗಿದೆ. ಅಂಥ ಪ್ರದೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಹೆಚ್ಚು ಸ್ಕೀಮ್‌ಗಳನ್ನು ಒದಗಿಸುವ ವಿಚಾರದಲ್ಲಿ ಇದರಲ್ಲಿ ಏನನ್ನೂ ಅಳವಡಿಸಿಲ್ಲ. ಆ ಬಗ್ಗೆ ನಾನು ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳಲ್ಲಿ ತಿಳಿಸುತ್ತ ಸೆಲೆಕ್ಟ್ ಕಮಿಟಿಯವರು ಕೂಡ ಇವುಗಳನ್ನೆಲ್ಲ ಪರಿಶೀಲನೆ ಮಾಡಬೇಕೆಂದು ನಾನು ಈ ಸಭೆಯ ಮೂಲಕ ಪ್ರಾರ್ಥನೆ ಮಾಡುತ್ತೇನೆ.

ಕೋಲಾರ ಜಿಲ್ಲೆ ಬಹಳ ಪ್ರಸಿದ್ಧವಾದ ಸ್ಥಳ. ಅಲ್ಲಿ ಬಂಗಾರ ಸಿಕ್ಕುತ್ತದೆ. ಆದ್ದರಿಂದ ಜನಗಳೆಲ್ಲ ಸಮೃದ್ಧರಾಗಿರುತ್ತಾರೆ ಎನ್ನುವ ಭಾವನೆ ಅನೇಕರಲ್ಲಿದೆ. ನನ್ನ ಅಭಿಪ್ರಾಯದಲ್ಲಿ ಹೇಳಬೇಕಾದರೆ, ಅಲ್ಲಿಯ ಸಮೃದ್ಧಿಯಲ್ಲ ಕೆರೆಗಳಲ್ಲಿದೆ ಎಂದು ತಿಳಿಸುತ್ತೇನೆ. ಆ ಕೆರೆಗಳೆಲ್ಲ ನೂರಾರು ವರ್ಷಗಳ ಹಿಂದೆ ಕಟ್ಟಿದಂಥ ಕೆರೆಗಳು. ಇವತ್ತು ಹಿಂದೆ ಕಟ್ಟಿದಂಥ ಕೆರೆಗಳೆಲ್ಲ ಹೂತು ಹೋಗುತ್ತಿವೆ. ಹಿಂದೆ ಇದ್ದ ಕೈಪಾಸಿಟಿಯಲ್ಲಿ ಕೆಲವು ಅರ್ಧವಾಗಿವೆ, ಕೆಲವು ಕಾಲುಭಾಗ ಕೈಪಾಸಿಟಿಗೆ ಇಳಿದಿವೆ. ಇಂಥ ಕೆರೆಗಳ ಕೈಪಾಸಿಟಿಯನ್ನು ಉತ್ತಮ ಪಡಿಸುವುದಕ್ಕೆ ಈ ಮಸೂದೆಯಲ್ಲಿ ಏನೂ ಅಡಕ ಮಾಡಿಲ್ಲ. ಮಾನ್ಯ ಮಂತ್ರಿಗಳು ಒಮ್ಮೆ ಮಾತನಾಡುವಾಗ ಒಂದು ಕೆರೆಯನ್ನು ಜೀರ್ಣೋದ್ಧಾರ ಮಾಡಬೇಕಾದರೆ, ಹಿಂದೆ ಇದ್ದ ಕೈಪಾಸಿಟಿಗೆ ತರಬೇಕಾದರೆ ವಿಶೇಷ ಹಣ ಬೇಕಾಗುತ್ತದೆ, ಅದಕ್ಕೆ ಹಣವಿಲ್ಲ, ಅದನ್ನು ಮಾಡುವುದು ಬಹಳ ಕಷ್ಟ ಎಂದು ಹೇಳುತ್ತಿದ್ದರು. ಕೆರೆಗಳು ಹೂತು ಹೋಗುವುದಕ್ಕೆ ಅನೇಕ ಕಾರಣಗಳಿವೆ. ನಾನು ನಮ್ಮ ತಾಲ್ಲೂಕಿನಲ್ಲಿ ನೋಡಿರುವಂತೆ ಕ್ಯಾಚ್‌ಮೆಂಟ್ ಏರಿಯಾವನ್ನೆಲ್ಲ ಉಳುಮೆ ಮಾಡಿರುತ್ತಾರೆ. ಅದನ್ನು ತಡೆಯುವುದಕ್ಕೆ ಶಕ್ತಿ ಇಲ್ಲದೆ ಕೆರೆಗಳು ಹೂತು ಹೋಗುತ್ತವೆ. ನೂರು ಎಕರೆಗೆ ಆಗುವಷ್ಟು ನೀರು ನಿಲ್ಲುತ್ತಿದ್ದ ಕೆರೆಯಲ್ಲಿ ಈಗ 50 ಎಕರೆ, 20 ಎಕರೆಗೆ ಆಗುವಷ್ಟು ಮಾತ್ರ ನೀರು ನಿಲ್ಲುವ ಸ್ಥಿತಿಗೆ ಇಳಿದಿದೆ. ಈ ರೀತಿ ಆಗುವುದನ್ನು ತಡೆಗಟ್ಟಲು ಇದರಲ್ಲಿ ಏನೂ ಅವಕಾಶವಿಲ್ಲ. ಸರ್ಕಾರದವರು ಉಗ್ರವಾದ ಕ್ರಮ ತೆಗೆದುಕೊಂಡು ಆ ರೀತಿ ಉಳುಮೆ ಮಾಡಿರುವವರನ್ನೆಲ್ಲ ಎವಿಕ್ಟ್ ಮಾಡಿ ಓಡಿಸಬೇಕು. ಅದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಕಾಂಟೂರ್ ಬಂಡ್ಸ್ ಹಾಕುವುದು, ಮರಗಳನ್ನು ಬೆಳಸುವುದು, ಇಂಥದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ಅಚ್ಚುಕಟ್ಟನ್ನು ಕಡಮೆಯಾಗುವಂತೆ ಮಾಡುವಂಥ ಯಾವ ಕಾರ್ಯಗಳನ್ನೂ ಮಾಡಬಾರದು ಮತ್ತು ಕೆರೆಯ ಮೇಲ್ಭಾಗದಲ್ಲಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾರಿಗೂ ಉಳುವುದಕ್ಕೆ ಅವಕಾಶ ಕೊಡಬಾರದು. ಈ ವಿಷಯುಗಳನ್ನು ಇದರಲ್ಲಿ ಸೇರಿಸಿದರೆ ಉತ್ತಮ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಕಾಲುವೆಯನ್ನು ತೆಗೆಯಲು ಭೂಮಿಯನ್ನು ಅಕ್ವೈರ್ ಮಾಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ನಮ್ಮ ತಾಲ್ಲೂಕಿನ ದೊಡ್ಡಮಲ್ಲೇಕೆರೆಗೆ ಮೂರು ಮೈಲಿ ದೂರ ಫೀಡರ್ ನಾಲೆಯನ್ನು ಮಾಡಿದ್ದಾರೆ. ಸಹಸ್ರಾರು ರೂಪಾಯಿ ಖರ್ಚು ಮಾಡಿ ಈ ನಾಲೆಯನ್ನು ತೆಗೆಸಿದ್ದಾರೆ. ಒಂದೇ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಒಂದು ಫರ್ಲಾಂಗ್ ನಾರೆ ಆಗುವುದಕ್ಕೆ ಅವಕಾಶವಾಗಿಲ್ಲ. ಎರಡು ಮೂರು ವರ್ಷದಿಂದ ಹಾಗೆಯೇ ಇವೆ. ಒಂದು ಫರ್ಲಾಂಗ್ ನಾರೆ ತೆಗೆಯುವುದಕ್ಕೆ ಬೇಕಾದ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಆಗದೆ ಅವೆಲ್ಲ ಶಿಥಿಲವಾಗಿದೆ. ಇದನ್ನು ಮಾನ್ಯ ಮಂತ್ರಿಗಳು ವೆರಿಫೈ ಮಾಡಬಹುದು. ಮಂದಿಗೆರೆಹಳ್ಳಿ ಕೆರೆಗೆ ಅರ್ಧ ಕಾಲುವೆಯನ್ನು ತಗೆಯಿಸಿದ್ದಾರೆ. ಕಂಟ್ರಾಕ್ಟರು ಕಾಲುವೆಯನ್ನು ತೆಗೆ ಯುವಾಗ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿಲ್ಲ ಎಂದು ರೈತರು ಹೇಳಿದರೂ ಕೇಳದೆ ಕಾಲುವೆಯನ್ನು ತೆ ದದ್ದರಿಂದ ಅವರೆಲ್ಲ ಕಾಲುವೆಯನ್ನು ಮುಚ್ಚಿಬಿಟ್ಟರು. ಇದರಿಂದ ಸಾವಿರಾರು ಖರ್ಚಾಗಿದೆ. ದೇಶದಲ್ಲಿ ಆಹಾರ ಪದಾರ್ಥಗಳು ಕಡಮೆ ಇವೆ. ಎರಡನೆಯ ಯೋಜನೆ ಮಾಡುವಾಗ ಎಷ್ಟು ಉತ್ಪತ್ತಿ ಇತ್ತೋ ಆದಕ್ಕಿಂತ ಕಡಮೆಯಾಗಿದೆ. ಯಾವ ವೇಗದಿಂದ ಕೆಲಸ ನಡೆಯಬೇಕೋ ಆ ವೇಗದಿಂದ ನಡೆಯ ತ್ತಿಲ್ಲ. ಅಕ್ವಿಜಿಷನ್ ವಿಚಾರದಲ್ಲಿ ಇಷ್ಟು ಅವಘಿಯಿಲ್ಲ ಒಂದು ಜಾಗ ಅಕ್ವೈರ್ ಆಗಲೇ ಬೇಕು ಎಂದು ನಿಯಮ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಆ ರೀತಿ ಈ ಮಸೂದೆಯಲ್ಲಿ ಕ್ಲಾಸನ್ ಬೇಕು ಎಂದು ಕೇಳುತ್ತೇನೆ. ಹಾಗೆ ಮಾಡಿದರೆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆಸುವುದರಲ್ಲಿ ವರ್ಷಾನುಗಟ್ಟಲೆ ಆಗುವುದಿಲ್ಲ.

ಇನ್ನು ಸೆಕ್ಷನ್ 15. ಯಾವುದಾದರೂ ಪ್ರದೇಶದಲ್ಲಿ ಜನರ ಹಿತದೃಷ್ಟಿಯಿಂದ ನೀರು ಒದಗಿಸುವುದು ಅಗತ್ಯ ಎಂದು ಇರಿಗೇಷನ್ ಆಫೀಸರರಿಗೆ ಕಂಡು ಬಂದರೆ, ಅಂಥ ಭಾಗದಲ್ಲಿ ಫಿಲ್ಡ್ ಚಾನಲ್ಸ್ ಅಂದರೆ ಕಾಲುವೆ ಮಾಡುವ ವ್ಯವಸ್ಥೆ ಮಾಡುವ ಬಗ್ಗೆ ಹೇಳಲಾಗಿದೆ. ಆದರೆ ರೆವಿನ್ಯೂ ಇಲಾಖೆ ಅಧಿಕಾರಿಗಳಿಗೆ ಯಾವ ಸ್ಥಳದಲ್ಲಿ ಕಾಲುವೆ ಬರಬೇಕು ಎನ್ನುವ ವಿಚಾರ ಅಷ್ಟು ಸರಿಯಾಗಿ ಗೊತ್ತಾಗುವುದಿಲ್ಲ. ಇದು ಟೆಕ್ನಿಕಲ್ ವಿಷಯವಾಗಿರುವುದರಿಂದ ಪಿ. ಡಬ್ಲ್ಯೂ. ಡಿ ಅವರಿಗೆ ಜೆನ್ಯಾಗಿಗೆ ತ್ತಿರುತ್ತದೆ. ಇದನ್ನು ಪಿ. ಡಬ್ಲ್ಯೂ ಡಿ ಯವರಿಗೆ ವಹಿಸಿಕೊಳ್ಳುವುದು ಒಳ್ಳೆಯದು. ಆದಷ್ಟು ಜಾಗ್ರತೆ ಕಾಲುವೆ ರಚನೆ ಮಾಡಬೇಕಾಗುವುದರಿಂದ ಮೂರು ತಿಂಗಳುಗಳಲ್ಲಿ ಕಾಲುವೆ ಮಾಡಬೇಕೆಂದು ಕಾನೂನಿನಲ್ಲಿ ಸೇರಿಸಬೇಕು. ಈ ಕೆಲಸದಲ್ಲಿ ಯಾವ ಅಡ್ಡಿ ಆತಂಕಗಳನ್ನು ಉಂಟು ಮಾಡಬಾರದು. ನಮ್ಮ ತಾಲ್ಲೂಕಿ ಲ್ಲಿ ಕರೆ ಕಾಲುವೆ ಮಂಜೂರು ಆಗಿದ್ದರೂ ಕೂಡ ಅನೇಕ ವರ್ಷ ಆವರೆಗೆ ಕೆಲಸ ನಡೆಯುತ್ತಲೇ ಇದೆ ಜಾಗ್ರತೆ ಕೆಲಸ ಮಾಡಲು ವ್ಯವಸ್ಥೆ ಮಾಡಬೇಕಾದದ್ದು ಅಗತ್ಯ.

ಇನ್ನು ಕ್ಲಾಜ್ 8 ರಲ್ಲಿ ಇರಿಗೇಷನ್ ವರ್ಸ್ ನಿಂದ ನೀರು ಉಪಯೋಗಿಸುವುದಕ್ಕೆ ಪರ್ಮಿಷನ್ ಕೊಡುವ ಬಗ್ಗೆ ಹೇಳಲಾಗಿದೆ. ಆರು ವರ್ಷಗಳ ವರೆಗೆ ನೀರು ಒದಗಿಸುವುದಕ್ಕೆ ಇರಿಗೇಷನ್ ಆಫೀಸರರಿಗೆ ಅಧಿಕಾರ ಕೊಡಲಾಗಿದೆ. ಕೆಳಗೆ ಎಲ್ಲ ನೀರಾವರಿ ಭೂಮಿಗೆ ನೀರು ಒದಗಿಸುವ ಅನುಕೂಲ ಮಾಡಿಕೊಡುವುದಾದರೆ ಅಚ್ಚುಕಟ್ಟು ಪ್ರದೇಶಕ್ಕೆಲ್ಲಾ ನೀರು ಸಾಕಾಗುವುದಿಲ್ಲ ಆದುದರಿಂದ ಈ ಇರಿಗೇಷನ್ ಬಾಬಿಗೆ ಕೆರೆಯಿಂದ ನೀರು ಒದಗಿಸುವುದಕ್ಕೆ ಒಂದು ವರ್ಷ ಮಾತ್ರ ಅವಕಾಶ ಕೊಡಿ ಎಂದು ನಾನು ಸೂಚಿಸುತ್ತೇನೆ. ಒಂದು ವರ್ಷ ಆದಮೇಲೆ ಪುನಃ ರಿನ್ಯೂ ಮಾಡಬಹುದು ಇಲ್ಲದಿದ್ದರೆ ಅನರ್ಥಕ್ಕೆ ಕಾರಣ ವಾಗುತ್ತದೆ. ಜಗಳಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇರಿಗೇಶನ್ ಆಫೀಸರ್ ಒಂದೊಂದು ವರ್ಷಕ್ಕೆ ರಿನ್ಯೂ ಮಾಡಬೇಕು. ಆರು ವರ್ಷದ ವರೆಗೆ ಅವಕಾಶ ಕೊಡುವುದು ಖಂಡಿತ ತಪ್ಪು. ಇದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

ಇನ್ನು ಇಂಥ ಬೆಳೆ ಬೆಳೆಯಬೇಕು ಎಂದು ವಿಧಿಸುವುದು ಬಹಳ ತಪ್ಪು ಆಗುತ್ತದೆ. ಇದರಿಂದ ರೈತನಿಗೆ ತೊಂದರೆಯಾಗುತ್ತದೆ ಯಾವ ಬೆಳೆಗೆ ಎಷ್ಟು ನೀರು ಬೇಕು ಯಾವ ರೀತಿ ನೀರಾವರಿ ಮಾಡಬೇಕು ಎಂಥ ಬೆಳೆ ಬೆಳೆಯಬೇಕು ಎಂಬುದು ರೈತನಿಗೆ ಗೊತ್ತಿರುತ್ತದೆ ಆದುದ ದಂದ ಈ ರೀತಿ ಒಂದು ನಿಯಮ ಮಾಡುವುದು ಸರಿಯಲ್ಲ. ಇದನ್ನು ವಾಪಸ್ ತೆಗೆದುಕೊಂಡು ಸೂಕ್ತ ಬದಲಾವಣೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

5-30 P M.

ಇನ್ನು ಫಿಲ್ಡ್ ಚಾನಲ್ಸ್ ಕೆಲಸ ರೈತನಿಗೆ ಬಿಡುವುದರಿಂದ ಬಹಳ ತೊಂದರೆಯಾಗುತ್ತದೆ. ರೈತನಿಗೆ ಇದನ್ನು ಬಿಟ್ಟುಕೊಡುವಾದದು. ರೈತನಿಂದ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದರ ಜವಾಬ್ದಾರಿ ಸರಕಾರದ್ದೇ ವಹಿಸಿಕೊಂಡು ಮಾಡಬೇಕು.

ವಾಟರ್ ರೇಟ್ ಹಾಕಿರುವುದು ಖಂಡಿತ ಹಾನಿಕ್ತಿಯಾಗಿದೆ. ಆದಷ್ಟು ಮಟ್ಟಿಗೆ ರೈತನಿಗೆ ಸಹಾಯವಾಗುವ ರೀತಿಯಲ್ಲಿ ಮಾಡಬೇಕು. ಇಂದು ದೇಶದಲ್ಲಿ ಶೇಕಡ 80 ರಷ್ಟು ಜನ ವ್ಯವಸಾಯವನ್ನೇ ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ವ್ಯವಸಾಯ ಮಾಡುವವರ ಉದ್ಧಾರ ಮಾಡಬೇಕೆಂಬ ಉದ್ದೇಶ ಇದ್ದರೆ ರೈತನ ಮೇಲೆ ಹೆಚ್ಚು ಹೆ ರೆ ಹೊರಿಸುವುದು ಬೇಡ. ಆದುದರಿಂದ ರೈತನಿಗೆ ಇದರಲ್ಲಿ ವಿನಾಯಿತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೆರೆ ಕಾಲುವೆ ವಿಚಾರದಲ್ಲಿ ನಮ್ಮ ತಾಲ್ಲೂಕಿಗೆ ಅಸಿಸ್ಟೆಂಟ್ ಎಂಜಿನಿಯರು ಬಂದಿದ್ದರು. ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಕೆಲಸ ಆಗಬೇಕಾಗಿದೆ ಎಂಬುದಕ್ಕೆ ಲಿಸ್ಟ್ ಮಾಡಿ ಕೊಟ್ಟಿದೆ. ಒಂದು ಅರ್ಜಿ ಕೊಟ್ಟರೆ ಅವರ ಮೇಲಿನ ಅಧಿಕಾರಿಗಳಿಗೆ ಕಳಿಸಿಕೊಡುತ್ತಾರೆ. ಇದರಿಂದ ಕಾಲ ವಿಳಂಬವಾಗುತ್ತದೆ. ಅನೇಕ ಸಲ ಮಧ್ಯದಲ್ಲಿ ಯಾರೋ ಕೊಕ್ಕೆ ಹಾಕಿದ ಮೂಲಕ ಕೆಲಸ ನಿಂತು ಹೋಗುತ್ತದೆ. ಇಂದು ದೇಶದಲ್ಲಿ ಆಹಾರದ ಕೊರತೆ ಇದೆ. ಹೆಚ್ಚು ಆಹಾರ ಬೆಳೆಯಬೇಕಾಗಿದೆ. ನಿಧಾನವಾಗುವುದನ್ನು ಜಾಗ್ರತೆ ತಪ್ಪಿಸಬೇಕಾದುದು ಅತ್ಯಗತ್ಯವಾಗಿದೆ. ಆದುದರಿಂದ ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತು ಕಾಗದ ಪತ್ರಗಳನ್ನು ನೋಡುವುದರ ಬದಲು ಪ್ರತಿಯೊಂದು ತಾಲ್ಲೂಕಿಗೆ ಹೋಗಿ ಅಲ್ಲಿಯೇ ಎರಡು ದಿನ ಕುಳಿತು ಕೊಂಡರೆ ವಿಚಾರ ವಿನಿಮಯ ಮಾಡಲು ಅನುಕೂಲವಾಗುತ್ತದೆ ಮತ್ತು ಜಾಗ್ರತೆ ಒಂದು ಶೀರ್ಮಾನಕ್ಕೆ ಬರಲು ಅವಕಾಶ ಉಂಟಾಗುತ್ತದೆ ಈ ರೀತಿ ಮಾಡಿದರೆ ಖಂಡಿತ ನಿವು ಗೆ ಕೀರ್ತಿ ಬರುತ್ತದೆ. ಕೊನೆಯದಾಗಿ ಕೆರೆ ಕಾಲುವೆ ಬಗ್ಗೆ ಅದಷ್ಟು ಜಾಗ್ರತೆ ಕೆಲಸ ಕಾರ್ಯಗಳನ್ನು ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Sir, I do not wish to go to the detailed provisions of the Bill, since we have been told that the Bill will be referred to a Select Committee and we have every hope that the Select Committee will give its best of consideration and make suitable alterations on the basis of the suggestions that various members have made on the Floor of this House. I would like to point out, in the first instance, that the principles of the Bill are good —the idea is welcome. But, I am sorry to say that it is a step not in the right direction. Precepts and practices should be the same —they should not be different. These are the days of democratic decentralization. Right from page one to the last page, we find that the executive authority is given excessive powers, if I could use that word, and the arbitrariness is felt in every section of it. We mean that the last man should have his say in the administration and we also say that it is the best Government that governs the least. But, unfortunately, it is a step in the wrong direction concentrating every power in the hands of the executive authority. This, perhaps, would have been allright before the days of Independence because it was then felt that the steel-frame of administration should run the day-to day administration. But, with the advent of freedom, with accepting the principles of democracy and with the idea of associating the largest number of people with the administration, the idea of decentralisation of functions has come up. We have fairly succeeded in decentralising of functions so far as Taluk Boards and Panchayats are concerned. I have not been able to understand the reluctance as to why we should not give some more powers to Government themselves. It may be argued that these bodies may not be able to govern themselves for whatever reasons that argument may be advanced. I, for one who believe that a beginning will have to be made somewhere. We will have to trust our own people; we will have to give powers to our own people. Possibly, they may commit mistakes, but that does not mean we are the only people who could do things in the right direction. Therefore, in the present context of the democratic development that we are thinking of, this is just one reversal. The irrigation officer, right from the beginning, is having powers of an arbitrary nature. For example, even the rotation of crops is a matter left to the

(SRI K. S. SURYANARAYANA RAO)

discretion of the executive officer. Can we not do it with a Committee at the lowest level? It may not be necessary to constitute a separate Committee. Can we not entrust it to a statutory body? The idea in this Bill seems to be that the field channels are not being done by the ryots themselves and therefore the Government has to come in. The Government has come in, I agree. But, I would suggest that, we have been saying, such valuntary effort through the community development programme and the like with the people feeling that this is their work and they must do it for the betterment of their own lot and is beneficial to them. It had its effect on the people. Possibly, we have taken to it because it is to admit that they have not taken to, is a point for us to develop that temparment and to create that hope in the people, and for that purpose, whatever machinery we have constituted will have to be geared up. If there are difficulties, they will have to be remedied and the impact of the Plan should be made felt on the population. The way the Bill is put before us is as though the Government is going to do everything themselves. But, it is a different thing. If the Plan has to have its impact, then every member of the community, who is sought to be benefited, should feel that he is benefited, that he may contribute his little might, little labour for his own benefit and indirectly to the community and to the State and the cause of agriculture. Therefore, this seems to suggest that there is something drastic lly wrong somewhere. I would earnestly request the Minister to consider this aspect of the matter and if there is any difficulty the same may be remedied at the Select Committee.

The other point is that this Bill seems to suggest that we will have to make a beginning somewhere and let us not wait; let us begin. But, in these days of planned development and scientific reasoning, this is not the way. For example, in the financial memorandum, it is stated that the cost of acquisition would be Rs. 3 per acre of benefited area. But, what reasoning is there that it will be only Rs. 3? It cannot be less than that; it will have to be much more. Likewise, we say: '50 per cent of the cost of construction of field channels at Rs. 7 per acre.' What is the principle on which you have worked out that figure? We are not having those figures. I believe, it is just an arbitrary calculation and not a scientific data worked out. We must do things on a scientific basis. Let us not start somewhere which leads us somewhere else. May be, it may take a little time, but let us do it in a proper and correct way. Time taken will not be lost, because the assured way is the scientific way. This calculation of Rs. 3 and Rs. 7 is inadequate to meet the expenditure. The heavily burdened State Budget, as it is to-day from what we learnt from the Finance Minister's statement at Mysore, will be leading to a catastrophic situation. This is a very serious matter. It is a very big responsibility. The construction of field channels is not a matter of few lakhs, it is a matter of few crores. It cannot be treated in an unscientific manner. If the resources are

sufficient enough, we do not mind making a little speculation, but not when we have to tighten up our belts.

Sri VEERENDRA PATIL (Minister for Public Works).—Do you mean to suggest that we should not construct field channels ?

Sri K. S. SURYANARAYANA RAO.—It is a good thing, but we will have to do it in a scientific way. They should realise the principle and execute the work. They should realise that this is a responsibility of the ryot and goes with the thinking that it is a development in his favour and he would do it. We leave it there. Supposing he has not done, is it not a matter for consideration as to why he has not developed. Is it because he is ignorant of the planned development or that he is reluctant to do ? Therefore, it is a matter which needs to be considered. They have mentioned Rs. 5/- per acre as maintenance cost. Sir, I for one who believe that Rs. 5/- will not be sufficient for the maintenance. Accepting Rs. 5/- today and taking up the work will mean two things. Either we will not complete the work or we will not pay men who complete the work. It means only that and nothing more. And if you want to pay the man who has completed the work, it is again burdening the State Budget by some unknown and uncalculated figure. Therefore, I say that even Rs. 5/- is an arbitrary figure. You may say, it is the minimum. I wish the State could come to a stage where we could even do away with this Rs. 5/-, and do not demand anything in this behalf. But we are still in this stage and we have got to take something more from the raiyat. To say that this is all the money we collect from him, is not the proper thing. Therefore, even if it means a little delay, this whole question will have to be scientifically worked out and worked in a scientific manner and steps taken to implement them. Development for no reason should be stopped. We understand it will have to be done. But it is not as if something must be done some how to yield some result. That some result will be no result if it is not done in the proper way.

The other point I would like the Minister to consider at the Select Committee level is, the point that is likely to affect the Constitution. Sir, we have a Bill by virtue of which we have to collect water rate and betterment levy. Here is another Bill to collect the tax. Could this be in order ? This is a matter which again will have to be seriously considered, because water rate includes everything. Betterment levy includes levy for development facilities given to that particular area. Therefore, whether this levy of water rates means water that is made available for the benefit of the particular land and to the tenant. So, water rate should also include the cost of maintenance and cost of repairs and construction. If the cost of construction and maintenance and repairs is included in the water rate, this would be an additional burden. It can only mean enhancement of water rate and it cannot be done by a separate statute and I believe there is a little constitutional snag or legal difficulty that will have to be considered at the Select Committee level. Because water rate will be collected from a person to whom water is made available. We

cannot collect water rate from a person who does not use it. By giving him water, you will have to collect the water rate, asking him to pay by drawing water to his field or very near about and we ask him to pay a little more for the water. For that purpose, let us consolidate the whole thing and make one uniform levy and let it be a little higher. But instead, if you have different and separate enactments and ask him to pay this, that and everything, then though the total quantum may not be very much, it leaves an impression that there are so many levies he is asked to pay though actually the payment is much less. Therefore, let us consider both these things together and fix up some thing higher. The feeling that he is being over-burdened should not be there. For that purpose if the law is intelligible and simple enough with minimum number of clauses, it will be easy for administration and it can be easily understood by the last man using water and it will be easy for him to follow.

My only idea in stressing this point is, this in any event is only an extension of the tax, water rate that we are collecting, the betterment levy that we are collecting and by calling it by some other name and making it appear different, does not stand to reason. Therefore, this will have to be merged in the betterment levy and water tax, so that they may think that there are a minimum number of levies. It does not matter it may be a little more money. It should be the minimum number of levies on the agriculturist. Then only he will feel that he is paying only one or two items, otherwise collecting agency will be more and there will be administrative cost. So we say that administrative cost should be brought down and efficiency should be raised. Multiplying the number of officers, multiplying the number of staff is not bringing about efficiency. The idea should be to have the least number of levies and achieving maximum result. The finances of the State is drained on the administrative pattern by creating so many new poses. Perhaps, even the financial memorandum may not give a real picture.

Sir, there is a provion in section 19. By way of illustration, I may mention:

> "On receipt of an application under clause (*b*) of section 18, the Irrigation Officer may call upon the applicant to deposit the whole or any part of the expense such officer may consider necessary; and upon such deposit being made, shall construct the field channel, and on its completion, shall give to the applicant notice thereof and of any sum payable by him on account of the cost of constructing the fie ldchannel. On such notice being given, such sum shall be due from the applicant to the State Government."

The suggestion is, on such deposit being made, he shall construct. The Work is taken only when the deposit is made under section 19. Now, the latter part of it says, 'on receipt of payment in full of all

expenses incurred, the applicant shall have the right to use the field channel for supply of water to his lands'. Supposing it is mentioned in instalments spread over a period of years, is it that he will not have the use of the water till the last pie is paid. And in default of payment, it may be recovered as arrears of land revenue. The first part says, no work shall be taken unless the amount it paid in full. The second part says that arrears will be colleced as an arrear of land revenue. Does it mean, merely because an application is made, he commits himself and makes himself liable for collection of the charges as an arrear of land revenue? I do not believe that it is the correct interpretation. If the money is not paid according to the terms and stipulation, then it will have to be collected as an arrear of land revenue. It says unless it is paid, it shall not be constructed.

Sri VEERENDRA PATIL.—Please read section 24 also along with that.

Sri K. S. SURYANARAYANA RAO.—By way of illustration I have mentioned one. I will not take any more time except to say that this Bill will have to be worked out on a more scientific basis and even if it means a little delay, it should not be taken as things put off. Otherwise, it would not only land ourselves into trouble; but it would land the finances into trouble.

ಶ್ರೀ ಎಸ್. ಸಂಬಯ್ಯ ನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಮೈಸೂರು ಇರಿಗೇಷನ್ನು ಬಿಲ್ಲು ಎಂದರೆ ನೀರಾವರಿ ಮಸೂದೆ ಸ್ವಾಗತಾರ್ಹವಾದುದು. ನಮ ಗಂತೂ ಇಂತಹ ಒಂದು ಕಾನೂನು ಬಹಳ ಮುಖ್ಯವಾದುದು ಮತ್ತು ಅಗತ್ಯವಾದುದು. ಇದರ ವಿಚಾರವಾಗಿ ಹೇಳುವುದಾದರೆ ರೈತರಿಗೆ ಅನುಕೂಲ ಮಾಡಲು ತರುವ ಯಾವುದೇ ಕಾನೂನು ಆದರೂ ಅದನ್ನು ತರುವಾಗ ಅದು ಸರಳವಾಗಿಯೂ ಮತ್ತು ಸ್ಪಷ್ಟವಾಗಿಯೂ ಇರಬೇಕು ಮತ್ತು ಅದಷ್ಟು ಚಿಕ್ಕರೂಪದಲ್ಲಿದ್ದರೆ ಹೆಚ್ಚು ಉತ್ತಮ. ಇದರಲ್ಲಿ ಕೆಲವು ಕಡೆ ನೋಡುವಾಗ ಅಸ್ಪಷ್ಟತೆಗಳು ಕಾಣುತ್ತವೆ. ಉದಾಹರಣೆಯಾಗಿ, ಇದರಲ್ಲಿ canal officer ಮತ್ತು ಇರಿಗೇಷನ್ ಆಫೀಸರು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಅವರು ಯಾವ ದರ್ಜೆಯ ಮಟ್ಟದ ಅಧಿಕಾರಿಗಳು ಎನ್ನುವುದೊಂದನ್ನು ಇದರಲ್ಲಿ ಸೂಚಿಸಿಲ್ಲ. ರೂಲ್ಸುಗಳಲ್ಲಿ ಮಾಡಬಹುದು ಎಂದ ಹೇಳಿದರೆ ಅವರು ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿದವರೆ, ನೀರಾವರಿ ಇಲಾಖೆಗೆ ಸೇರಿದವರೇ, ರೆವಿನ್ಯೂ ಇಲಾಖೆಯವರೇ ಅಥವಾ ಬೇರೆ ಇನ್ನಾವ ಇಲಾಖೆಗೆ ಸೇರಿದವರು ಎನ್ನುವ ಒಂದು ಸೂಚನೆಯನ್ನು ಕೊಟ್ಟಿಲ್ಲ. ರೂಲ್ಸಿನಲ್ಲಾದರೂ ಅವರ ಹುದ್ದೆಯ ಹೆಸರನ್ನು ಹಾಕಬಹುದು. ಆಫೀಸರು ಯಾರು ಎನ್ನುವುದನ್ನು ತಿಳಿದುಕೊಂಡರೆ ಅವರನ್ನು ರೈತರು ಭೇಟಿ ಮಾಡಲಕ್ಕೆ ಅನುಕೂಲವಾಗುತ್ತದೆ.

ಇದರಲ್ಲಿರುವ 44ನೇ ಪ್ರಕರಣದಲ್ಲಿ ಒಂದು ಎಕರೆಗೆ ಮೇಂಟೆನೆನ್ಸು ಫೀಸ್‌ಗಾಗಿ 5 ರೂಪಾಯಿಗಳನ್ನು ಸಂಸ್ಥಾನಾವಳಿ ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಒಂದೆರಡು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಇರಿಗೇಷನ್ನು ಮಾಡುವ ಒಬ್ಬನು ಒಂದು ಬೆಳೆ ಬೆಳೆದು 5 ರೂಪಾಯಿನಂತೆ ಕೊಡಬೇಕು, ಹಾಗೇ ಎರಡು ಮೂರು ಬೆಳೆಗಳನ್ನು ಬೆಳೆಯುವವರೂ 5 ರೂಪಾಯಿನಂತೆ ಕೊಡುತ್ತಾರೆ. ಭತ್ತ, ರಾಗಿ ಬೆಳೆಯುವವರೂ ಎಕರೆಗೆ 5 ರೂಪಾಯಿನಂತೆ ಕೊಡಬೇಕು ಎಂದರೆ, ಅಕ್ಕಿ, ರಾಗಿ ಇತರ ಎಲ್ಲ ಬಗೆಯ ಬೆಳೆಗೂ 5-00 ರೂನಂತೆ ಒಂದೇ ರೀತಿಯಾಗಿ ಕೊಡಬೇಕೆಂದು ಮಾಡುವುದು ಅಷ್ಟು ಒಳ್ಳೆಯದಲ್ಲ. ನೀರಾವರಿ ಮಾಡುವವನು ಅವನ ಬೆಳೆಗೆ ಒಂದು ಎಕರೆಗೆ ಅರ್ಧದಷ್ಟು ನೀರನ್ನು ಉಪಯೋಗಿಸಿದರೂ ಎಕರೆಗೆ 5 ರೂಪಾಯಿನಷ್ಟು ಕೊಡಬೇಕು ಎಂದರೆ ನರಿಕಾಣುವುದಿಲ್ಲ. ಅರ್ಧದಷ್ಟು ನೀರು ಉಪಯೋಗಿಸಿದರೂ ಎಕರೆಯೊಂದಕ್ಕೆ ಇಷ್ಟೇ ಕೊಡಬೇಕೆಂದು ನಿಶ್ಚಯ ಮಾಡುವುದು ನ್ಯಾಯಾನುಮತವಾಗುವುದಿಲ್ಲ. ನೀರಾವರಿಗಾಗಿ ಎಷ್ಟು ನೀರು ಉಪಯೋಗವಾಯಿತು ಅದರಿಂದ ಉತ್ಪನ್ನವೆಷ್ಟಾಯಿತು ಎನ್ನುವುದನ್ನು ನೋಡಿಕೊಂಡು ಮಾಡಿದರೆ ಅದು ಹೆಚ್ಚಿಗೆ ನ್ಯಾಯ ಸಮ್ಮತವಾದೀತು.

(ಶ್ರೀ ಎಸ್. ಸಂಬಯ್ಯ ನಾಯಕ್)

8 ನೇ ಕ್ಲಾಸಿನಲ್ಲಿ 5ನೇ ಪಂಕ್ತಿಯಲ್ಲಿ " Irrigation Officer and any person or persons acting under the general or special order of such Irrigation officer, may enter upon as such lands.....or repair if such charge ಎಂದಿದೆ.

6-00 P M.

ಇದರಲ್ಲಿರತಕ್ಕಂಥ ಭೂಮಿಯವರು ತೊಂದರೆಪಡಿಸಬಹುದು, ಏಕೆಂದರೆ ಅಲ್ಲಿ ಅತನು ತೋಟ ಮಾಡಿಕೊಂಡು ತೆಂಗು ಹಾಗೂ ಅಡಕೆ ಮರಗಳನ್ನು ಬೆಳೆದಿರಬಹುದು. ಆಗ ಅತಂಕಪಡಿಸಬಹುದು. ಅದುದರಿಂದ ಅಧಿಕಾರಿಗಳು ಹೋಗುವಾಗ ಯಾವ ಭೂಮಿಯನ್ನು ಪ್ರವೇಶಿಸಬೇಕಾದರೆ ಹಿಡುವಳಿದಾರನು ಒಂದು ಸಮಸ್ಯೆಯಾಗುತ್ತದೆ. ಆದುದರಿಂದ ಇದರಲ್ಲಿ ಅಕ್ಕಪಕ್ಕ ಹಿಡುವಳಿದಾರರು ಆತಂಕ ಮಾಡದಂತೆ ಈ ಆಫೀಸರುಗಳು ಪ್ರವೇಶಿಸಬೇಕೆಂದು ಸೇರಿಸಬೇಕು. ನಮ್ಮ ಭಾಗದಲ್ಲಿ ಎರಡು ಮೂರು ಅಣೆಕಟ್ಟುಗಳನ್ನು ಕಿತ್ತುಹಾಕಿ ಕೊಂದರೆಯಾಗಲು ಅನಾನುಕೂಲಗಳು ಆಗಿವೆ.

ಕ್ಲಾಜು 27ರಲ್ಲಿ ತಾಲ್ಲೂಕು ಬೋರ್ಡ್, ನೀರಾವರಿ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಇರಿಗೇಷನ್ನು ಕಮಿಟಿ ಎಂದ ನೀರಾವರಿಗಾಗಿ ಇದೆ, ಸಣ್ಣ ನೀರಾವರಿಗಾಗಿ ತಾಲ್ಲೂಕ್ ಬೋರ್ಡ್ ಲೆವೆಲ್ ಕಮಿಟಿ ಎಂದು ಬೇರೆ ಇದೆ. ಈ ಕಮಿಟಿಯಲ್ಲಿ ತಹಶೀಲುದಾರರ ಅಸಿಸ್ಟೆಂಟ್ ಇಂಜನಿಯರು, ಇರಿಗೇಷನ್ನು ಆಫೀಸರು, ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಆಫೀಸರು ಮತ್ತು ತಾಲ್ಲೂಕು ಸರ್ವೆ ಆಫೀಸರು, ತಾಲ್ಲೂಕ್ ಡೆವಲಪ್‌ಮೆಂಟು ಬೋರ್ಡಿನ ಪ್ರೆಸಿಡೆಂಟರು, ಹಾಗೂ ಇತರ ಅಧಿಕಾರ ವರ್ಗದವರಿಬ್ಬರನ್ನು ಜೊತೆಗೆ ಸಂಬಂಧಪಟ್ಟ ಏರಿಯಾದಲ್ಲಿರುವ ನಾನ್-ಅಫಿಷಿಯಲ್ಸ್‌ಗಳು 2-3 ಜನರು ರೈತರು ಆಥವಾ ಹಿಡುವಳಿದಾರರು ಇಲ್ಲಿರುವ ಲಿಸ್ಟಿನಲ್ಲಿ ಸೇರಿಸಿಕೊಂಡು ಕಮಿಟಿ ಮಾಡುವುದಿರುತ್ತದೆ ಮತ್ತು ಅನುಕೂಲ. ಇಲ್ಲದಿದ್ದರೆ ಬರೀ ಆಫೀಸರೇ ಇಲ್ಲಿ ಕೆಲಸ ಮಾಡುವುದು ಹೇಗೆ ಎಂಥ ಯೋಚನೆ ಮಾಡಬೇಕಾಗುತ್ತದೆ. ನಾನ್-ಅಫಿಷಿಯರ್ಸ್‌ಗಳಿದ್ದರೆ ಕಾನೂನಿನಂತೆ ಕೆಲಸಗಳನ್ನು ಮಾಡಲು ಹೆಚ್ಚು ಸುಗಮವಾಗುತ್ತದೆ.

ಇನ್ನು ಫೀಲ್ಡ್ ಚಾನಲ್ ವಿಚಾರವಾಗಿ ಹೇಳುತ್ತಾ ಶ್ರೀಮಾನ್ ಸೂರ್ಯನಾರಾಯಣ ರಾಯರು ಹೇಳಿದಂತೆ ನಾನೂ ಹೇಳಬೇಕಾಗುತ್ತದೆ. ನಾವಾ ತೆಗೆದುಕೊಳ್ಳಲು ರೈತನೇ ಖರ್ಚು ಮಾಡಿಕೊಂಡು ಮಾಡಲಕ್ಕೆ ಸಾಧ್ಯವಾದೀತು. ಅಲ್ಲದೆ ಗದ್ದೆ ಹೊಲಕ್ಕೆ ಫೀಲ್ಡ್ ಚಾನಲ್ಲನ್ನೂ ತರುವುದಕ್ಕಾಗಿ ಖರ್ಚು ಕಡಿಮೆಯಾಗಲು ಅವನೇ ಮಾಡಿದರೆ ಅಥವಾ ಅವನ ಜಾಗಗಳ ಮೂಲಕ ವಾಡಲು ಸಾಧ್ಯವುಂಟು. ಈ ಇರಿಗೇಷನ್ನು ಆಫೀಸರಾದವರು ಭೂಮಿಯನ್ನು ಮಾರ್ಕ್ ಮಾಡಿಕೊಂಡು, ಅವರೇ ಈ ನಾಲೆಗಳನ್ನು ತೆಗೆದರೆ ಸಂಬಂಧಪಟ್ಟ ರೈತನಿಗೆ ಇದು ಗೊತ್ತಾಗುವುದಿಲ್ಲ. ಇದರ ಬಗ್ಗೆ ಇರುವ ಅಧಿಕಾರಿಗಳು ಈ ಸಮಸ್ಯೆಯನ್ನು ಅರಿತು ಪರಿಹಾರ ಮಾಡುವುದೊಳ್ಳೆಯದು ಎಂದು ನಾನು ಹೇಳುತ್ತೇನೆ.

ಮತ್ತೊಂದು ಸಣ್ಣ ವಿಚಾರ: ಅಣೆಕಟ್ಟು ಒಡೆದು ಹೋದಾಗ ಅಥವ ಇನ್ನಾವುದಾದರೂ ತುರ್ತು ರಿಪೇರಿ ಕೆಲಸಕ್ಕೆ ಜನ ಬೇಕಾದಾಗ, ಅವನನ್ನು ಕರೆದರೆ ಅವರು ಹಾಜರಿರತಕ್ಕದ್ದು ಎಂದು ಎಂದಿ ವಂಡಿದ್ದೀರಿ. ಹಳ್ಳಿಯವರು ಬಂದು ಆ ಕೆಲಸಗಳನ್ನು ಎಕ್ಸಿಕ್ಯೂಟ್ ಮಾಡುವುದರಲ್ಲಿ ಸಹಾಯ ಮಾಡುವುದು ಅವರ ಕರ್ತವ್ಯ, ಅವರನ್ನು ಕಡ್ಡಾಯವಾಗಿ ಕರಸುತ್ತೀರಿ, ಇದು ಒಳ್ಳೆಯದು. ಆದರೆ ಅವರು ನೇರವಾಗಿ ಬಂದರೆ ಅವರ ಕೆಲಸಕ್ಕೆ ಹಗಲು ಹೊತ್ತಿಗೆ ಶೇಕಡ 25 ರಷ್ಟು ಜಾಸ್ತಿ ರೇಟು, ರಾತ್ರಿ ಹೊತ್ತು ಶೇಕಡ 50 ರಷ್ಟು ಜಾಸ್ತಿ ಕೊಡುವರು ಎಂದು ನಿಗದಿ ಮಾಡಿದ್ದೀರಿ. ಇಂಥ ಸಮಯಗಳಲ್ಲಿ ಹಳ್ಳಿಯವರು ತುಂಬಾ ಶ್ರಮಪಟ್ಟು ಕೆಲಸ ಮಾಡುತ್ತಾರೆ, ಹೆಚ್ಚು ಕಷ್ಟಪಟ್ಟು ಕೆಲಸ ಮಾಡುತ್ತಾರೆ; ಅವರು ಅಪಾಯಕ್ಕೆ ಒಳಗಾಗಿಯೂ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಹೆಚ್ಚಿಗೆ ರೇಟನಲ್ಲಿ ಅವರ ಕೆಲಸಕ್ಕೆ ಪೇಮೆಂಟ್ ಮಾಡಬೇಕಾದ್ದು ಅಗತ್ಯ. ಸಾರ್ವಜನಿಕರು ತಮ್ಮ ಸ್ವಂತ ಕೆಲಸಕ್ಕೆ ಅನಾನುಕೂಲ ಮಾಡಿಕೊಂಡೂ ಹೋಗಬೇಕಾಗುತ್ತದೆ ಆದ್ದರಿಂದ ಇಂಥ ಸಮಯದಲ್ಲಿ ಕೆಲಸ ಹಗಲು ಹೊತ್ತಿಗಾದರೆ, ಶೇಕಡಾ 50 ರಂತೆ ಜಾಸ್ತಿ ಕೊಡುವುದು, ರಾತ್ರಿ ಹೊತ್ತಾದರೆ ಅದರ ಎರಡರಷ್ಟು ಅಂದರೆ 100 ಪರ್ಸೆಂಟ್ ಜಾಸ್ತಿ ಕೊಡಬೇಕೆಂದು ನನ್ನ ಸಲಹೆ; ಈ ತಿದ್ದುಪಡಿಯನ್ನು ಈ ಮಸೂದೆಯಲ್ಲಿ ಮಾಡಿಕೊಳ್ಳಬೇಕು.

ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋಗುವುದಿದೆ, ಅಲ್ಲಿ ಇದನ್ನು ತುಲನಾತ್ಮಕವಾಗಿ ಮತ್ತು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ, ಇದು ಬೇಗನೆ ಈ ಪಥೆಯ ಮುಂದೆ ಬರುವಂತೆ ಮಾಡುತ್ತಾರೆಂದು ನಿವೇದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri G. V. GOWDA.—Mr. Speaker, Sir, the principles adumberated in this Bill are welcome and it is a good thing that the Government, wishes to take the work of construction, maintaining and supply of water. At the same time I wish to rase this question, whether they have such principles as found in the preamble of this Bill, *i.e.*, to impose or levy under the guise of maintenance, this cess. Clause 44 seeks to levy five rupees per annum per acre. The extent of land that would come under irrigation would be about 2,000 acres and the levy would be ten thousand rupees for the establishment like the field officer or canal officer. At the most Government will have to pay 2 or 3 thousand for this per annum. But, they intend to collect ten thousand rupees per annum through this means. Is it justifiable? The other point is, whether in such a Bill, we can make provision for another clause for the imposition of the cess itself. We are levying water rate for making water available to the field. We are also levying betterment contribution to realise the cost incurred for the construction of that particular work. Does this water rate not include even the maintenence of the particular irrigation work? From constitutional point of view, are we in order to impose levy in a bill which provided for construction, maintenance and regulation of supply of water? In my humble opinion, it is desirable to delete this particular clause which seeks to impose the maintenance cess. Sir, it is right to presume that this water rate includes this cess also. It would be wrong if we try to retain this clause of imposing cess. As it is, Government is contemplating to increase the water rate for field taking water for the purpose of growing sugar-cane to 75 rupees, for paddy field 30 rupees and fields under tank 10 rupees. Such being the case, I cannot understand why this Government made up its mind to have a clause which is unconstitutional and particularly in a statute like this, which provides for something else.

Sir, clause 32 seeks to have power to prescribe the crop to be grown in a prescribed area and this also runs against the spirit of the principles of the Bill. Our business is to construct, maintain and regular supply of water. We should not be concerned with that the raiyat chooses to grow in his land. After all, the raiyat does it to the best of his advantage and to the good of the State. Sir, I agree with my friend Sri Suryanarayana Rao that excess power is going to be vested with the Government. Except technical aspects the other aspects may be vested in units other than the executive authority. This clause 32 is ununderstandable. Supposing an irrigation work costing two crores would irrigate 10,000 acres and water could be made available to 10,00 acres. When the rate of paddy is 25 rupees and if the raiyat can realise 250 rupees by growing sugar cane, why should we prevent him? I must be entitled to choose my own crop.

Mr. SPEAKER.—If there are 20,000 acres and water is sufficient for 10,000 acres, what has to happen to the other 10,000 acres? They must regulate the crop so that all get water.

Sri G. V. GOWDA.—Government will know to what extent water could be made available. If water is available to 10,000 acres of paddy

(Sri G. V Gowda)

land if people choose to convert it to sugar cane, then this argument would be allright.

Mr. SPEAKER.—Provision has to be made to meet various contingencies that might arise.

†ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ಅನುಭವದಲ್ಲಿ ಇಂಥ ಬೆಳೆ ಇಡಬೇಕು ಎಂದು ಒಂದು ನಿರ್ಬಂಧವನ್ನು ಹಾಕುವುದು ಒಳ್ಳೆಯದು. ಒಂದು ಪ್ರದೇಶದಲ್ಲಿ ಪೂರ್ತಿ ಡ್ರೈ ಕ್ರಾಪ್ ಇಡುತ್ತಾರೆ. ಉದಾಹರಣೆಗೆ ದವಸ ಬೆಳೆಯನ್ನು ಇಟ್ಟಿರುತ್ತಾರೆ. ದುರುದ್ದೇಶದಿಂದ ಅದನ್ನು ಹಾಳು ಮಾಡಬೇಕು ಎಂದು ಮಧ್ಯೆ ಬತ್ತದ ಗದ್ದೆ ಮಾಡುತ್ತಾರೆ. ಬತ್ತದ ಗದ್ದೆಗೆ ನೀರು ಬೇಕು. ಅದಕ್ಕೆ ನೀರು ಬಿಟ್ಟರೆ ಅದರ ಸುತ್ತಮುತ್ತಲೂ ನೂರಾರು ಎಕರೆ ಜಮೀನಿಗೆ ತೇವ ತಟ್ಟುತ್ತದೆ. ಅದರಿಂದ ಆ ಜಮೀನಿನಲ್ಲಿಟ್ಟಿರುವ ಬೆಳೆ ಹಾಳಾಗುತ್ತದೆ. ಈ ರೀತಿಯ ಉದ್ದೇಶದಿಂದ ಕೆಲವರು ಕೆಲಸ ಮಾಡುತ್ತಾರೆ.

Sri G. V GOWDA.—So far as award to be made for the land acquired is concerned, a different procedure has been prescribed under clause 16. In clause 19, if a person deposits 50 per cent and field channels are constructed, he cannot make use of the water until he pays up the balance. I suggest that he might be asked to pay the balance in easy instalments just as being done in the case of agriculturists who receive loans for digging irrigation wells.

So far as clause 28 is concerned, a penalty is imposed if a person unauthorisedly uses water. That is correct. But we go a step further and ask him to pay water rate also to the extent of not less than 10 times and not exceeding 30 times. In my opinion, it is not proper to penalise a person twice for the same offence.

Clause 31(2) is strange. Supposing, I am entitled to water and that is not given. I have to pay dry assessment, even then, whether I plough the land or not. In fact, Government is bound to pay reasonable compensation to the affected individual, because they are going back on their assurance.

†Sri VEERENDRA PATIL.—There is a provision under clause 33. If a person incurs loss, he is entitled to compensation.

Sri G. V. GOWDA.—Clause 32 envisages a different situation. If I do not get water, do I not loose.

Under the proviso to the clause, the State Government has to approve the award given by the Deputy Commissioner. I do not understand the need for the State Government coming into the picture. Under the Land Aquisition Act, the Deputy Commissioner has unfettered power and thatshould be the position here also. The person concerned has the right ofappeal to the Revenue Appellate Tribunal. The Tribunal will be sitting over practically the decision of Government.

Finally, I should say that I have no objection for the Hon'ble Minister increasing betterment levy straightaway but such a levy should not be incorporated in the guise of this Bill. I hope the Select Committee would look into these matters.

†ಶ್ರೀ ಎ. ಎಂ. ದೇವ್ (ಗುಬ್ಬಿ) —ಸ್ವಾಮಿ, ಈ ಇರಿಗೇಷನ್ ಬಿಲ್ಲಿನಲ್ಲಿ ಒಟ್ಟಿನ ಅಭಿಪ್ರಾಯ construction, maintenance, regulation and supply of water and certain other matters. ಇದು ನಮ್ಮ ದೇಶದ ಬಹು ಸಂಖ್ಯಾತ ಜನಜೀವನವನ್ನು ರೂಪಿಸುವುದರಲ್ಲಿ

ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ ಎಂದು ನನಗನ್ನಿಸುತ್ತದೆ. ಆ ದೃಷ್ಟಿಯಿಂದ ಈ ಮನೆದೆಗೂ ಅಂಥ ಜನಜೀವನಕ್ಕೂ ಎಲ್ಲೆಲ್ಲಿ ನಿಕಟವಾದ ಸಂಬಂಧವಿದೆ, ಎಲ್ಲೆಲ್ಲಿ ಈ ಜನಜೀವನಕ್ಕೂ ಹಿನ್ನೆಲೆಗೂ ತಾಳ ಬೀಳುವುದಿಲ್ಲ ಎನ್ನುವುದನ್ನು ಮುಂದೆ ಇಟ್ಟುಕೊಂಡು ಇದನ್ನು ವಿಮರ್ಶೆ ಮಾಡಬೇಕೆಂದು ನನಗನ್ನಿಸುತ್ತದೆ.

ಎಲ್ಲಕ್ಕಿಂತ ಮುಂಚೆ ಭೂಸುಧಾರಣೆ ಬೇಕು. ಅದೂ ಅಲ್ಲದೆ ದೇಶದಲ್ಲಿ ಆಹಾರಾಭಾವವಿದೆ. ರೈತರು ಬಹಳ ಸಾಲಗಾರರಾಗಿದ್ದಾರೆ. ಅವರಿಗೆ ಬೇರೆ ಯಾವ ಕನಬೂ ಬರುವುದಿಲ್ಲ. ಅಕ್ವಿಜಿಷನ್ ಮಾಡುವುದು ಆ ದೃಷ್ಟಿಯಿಂದ ಬಹಳ ತ್ಯಾಜ್ಯ ಮಾಡಬೇಕು. ಅಕ್ವಿಜಿಷನ್ ಮಾಡಿಕೊಂಡರೆ ಅವರಿಗೆ ಅಷ್ಟೋ ಇಷ್ಟೋ ದುಡ್ಡು ಕೊಡುತ್ತೀರಿ. ದೊಡ್ಡ ಪ್ರಾಜೆಕ್ಟ್ ಆಗಿ, ದೊಡ್ಡ ಸಾಲಗಳನ್ನು ತೆಗೆದು ಕೊಂಡು ಬಂದರೆ ಬಡವನಾದವನು ಒಂದೆರಡು ಎಕರೆ ಜಮೀನನ್ನು ಇಟ್ಟುಕೊಂಡಿದ್ದರೆ ಅಷ್ಟನ್ನೂ ನುಂಗುವಂಥ ಸಂದರ್ಭ ಬರುತ್ತದೆ. ಆ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕು. ಹಣಕ್ಕೆ ಬದಲಾಗಿ ಉಳ್ಳವರಿಂದ ಅಚ್ಚುಕಟ್ಟಿನ ಪ್ರದೇಶದಲ್ಲಿ ಜಮೀನು ಕೊಡಬೇಕು.

ಇದರಲ್ಲಿ ಒಂದು ಎಕರೆ ಜಮೀನಿಗೆ ಐದು ರೂಪಾಯಿ ಮೇಂಟೆನನ್ಸ್ ಸೆಸ್ ಹಾಕುತ್ತೇವೆಂದು ಹೇಳಿದ್ದಾರೆ. ಈಗಿನ ಹಣದ ಮೌಲ್ಯವನ್ನು ನೋಡಿಕೊಂಡರೆ ಐದು ರೂಪಾಯಿ ಜಾಸ್ತಿಯಾಯಿತು. ಮುಖ್ಯವಾದ ವಿಷಯವೆಂದರೆ ಮೊನ್ನೆ ತಾನೆ ಮುಖ್ಯ ಮಂತ್ರಿಗಳು ಹೇಳಿದರು ಇನ್ನು ಯಾವ ತೆರಿಗೆಯನ್ನೂಗಲು ಜಾಸ್ತಿ ಮಾಡುವುದಿಲ್ಲ ಎಂದು. ಆದರೆ ಇದರಲ್ಲಿ ಎಕರೆಗೆ ಐದು ರೂಪಾಯಿ ತೆರಿಗೆ ಹಾಕಲು ಆಗಲೇ ಮಸೂದೆಯನ್ನು ತಂದಿದ್ದೀರಿ. ಇದು ಎಷ್ಟು ಸಾಧುವಾದುದು ಎಂದು ಯೋಚನೆ ಮಾಡಬೇಕು. ಕಂದಾಯವನ್ನು ಏರಡರಷ್ಟು ಮಾಡಿರುವಾಗ ಇದನ್ನು ತರಬೇಕಾದ ಅವಶ್ಯಕತೆ ಇತ್ತೇ ಎಂಬುದನ್ನು ಯೋಚನೆ ಮಾಡಿಲ್ಲ ಎಂದು ಕಾಣುತ್ತದೆ. ಜನಜೀವನದ ರೀತಿಯಲ್ಲಿ ಒಂದು ರೀತಿಯ ಕವಲು ಒಡೆದು ತಕ್ಕ ವ್ಯವಸ್ಥೆಯಿಲ್ಲದೆ ತೊಂದರೆಯಾಗುತ್ತದೆ ಎಂದು ಅನ್ನಿಸುತ್ತದೆ. ಒಂದು ಎಕರೆಗೆ ಒಂದು ವರ್ಷಕ್ಕೆ ಐದು ರೂಪಾಯಿ ಸೆಸ್ ಹಾಕಿರುವುದರ ಹಿನ್ನೆಲೆ ಏನಿದೆ ಅದರ ಅರಿವು ಇಲ್ಲದೇ ಇರುವುದರಿಂದ ಕೋಆರ್ಡಿನೇಷನ್ ಇಲ್ಲದೆ ಅರಾಜಕತೆಯುಂಟಾಗುತ್ತದೆ. ಹಾಗಾದರೆ ಇದರ ಹಿನ್ನೆಲೆ ಏನು? ಸ್ಥಳೀಯ ಸಂಸ್ಥೆಗಳು ಇವೆ. ಪಂಚಾಯಿತಿ ರಾಜ್ಯ ಮಾಡಿದ್ದೀರಿ. ತಾಲ್ಲೂಕ್ ಬೋರ್ಡ್ ಇದೆ, ಜಿಲ್ಲಾ ಪರಿಷತ್ತು ಇದೆ. ಇವೆಲ್ಲಾ ನಕಲಿ ಏರ್ಪಾಟು ಮಾಡಿದ್ದೀರಿ ಎಂದು ಅನಿಸುತ್ತದೆ. ಇದನ್ನು ಯೋಚನೆ ಮಾಡಬೇಕಾದುದು ಅಗತ್ಯ. ಕ್ಲಾಜ್ 4 ಪ್ಯಾರಾ 2ರಲ್ಲಿ ಈ ರೀತಿ ಇದೆ—

> "Provided that the previous sanction shall not be necessary in the case of such classes of wells....."

ಬಾವಿ ವಿಚಾರದಲ್ಲಿ ಹೀಗೆ ಹೇಳಿರುವುದು, ಅರ್ಥವಾಗುವುದಿಲ್ಲ. ರೈತ ತನ್ನ ಜೀವನಕ್ಕಾಗಿ ಬಾವಿ ತೆಗೆಸುತ್ತಾನೆ. ಬಾವಿ ನೀವೆ ಕಟ್ಟಿಸಿಕೊಡಲು ಆಗದೇ ಇದ್ದರೆ ರೈತನಿಗೆ ಅಡ್ಡಿ ಏಕೆ ಮಾಡುತ್ತೀರಿ? ಇದರ ಅರ್ಥವಾಗುವುದಿಲ್ಲ. ನೀವೂ ಮಾಡುವುದಿಲ್ಲ ಮತ್ತು ಮಾಡುವವರಿಗೂ ಅಡ್ಡಿ ತರುತ್ತೀರಿ.

ಇನ್ನು ಕ್ಲಾಜ್ 45 ರಲ್ಲಿ ಈ ರೀತಿ ಇದೆ—

> "Except as may be prescribed, no person other than the Irrigation Officer shall—
>
> (*a*) interfere with or divert the course of a natural stream; or
> (*b*) construct any reservoir across any natural stream; or
> (*c*) construct any earthen or masonry bund or weir on any channel or stream, flowing above or below any field channel."

ಇದು ಸರಿಯಾಗಿಲ್ಲ. ಒಂದು ಕಡೆ ಫೀಲ್ಡ್ ಚಾನಲ್ ಬರುತ್ತದೆ. ನೀರು ಭೂಮಿ ಸರಕಾರಕ್ಕೆ ಸೇರಿರುತ್ತದೆ. ಅಂಥಲ್ಲಿ ರೈತ ಜಮೀನು ಮಾಡಿಕೊಂಡಿರುತ್ತಾನೆ. ಒಂದು ಕೆರೆ ಕಟ್ಟಿಬಿಟ್ಟು ನೀರು ಏತಕ್ಕೆ ಕೊಡಬಾರದು? ಅಂಥಲ್ಲಿ ಯಾವ ಅಡ್ಡಿ ಆಡಚಣೆಗಳು ಬರಬಾರದು.

ಇನ್ನು ಕ್ಲಾಜು 40—41ರಲ್ಲಿ ಈ ರೀತಿ ಇದೆ—

> "it shall be lawful for such officer to either himself call upon or....."
>
> "Payment to persons:—All persons complying with the requisition under section 40 shall, as soon as may be, resonably practicable....."

(ಶ್ರೀ ವಿ. ಎಂ. ಪೇಪ್)

ಇದು ಸಹ ಸರಿಯಾಗಿಲ್ಲ. ಈ ಅಧಿಕಾರ ಪಂಚಾಯತಿಗೆ ಇರಬೇಕು. ಜನತೆ ಅಂದರೆ ಪಂಚಾಯತಿ. ಈಗಾಗಲೇ ಡಬ್ಬಲ್ ಕಂದಾಯ ಹಾಕಿದ್ದೀರಿ. ಹೀಗೆ ಮಾಡಿದರೆ ಇದರಿಂದ ಹಣ ವ್ಯಯವಾಗುವುದಕ್ಕೆ ಕಾರಣವಾಗುತ್ತದೆ. ಇನ್ನೊಂದು ಪೇಮೆಂಟ ಕ್ವೆಸ್ಚನ್.....

Mr. SPEAKER.—The Hon'ble Member may continue his speech tomorrow. The House will now rise to meet tomorrow at 1 P.M.

The House adjourned at Thirty Minutes past Six of the Clock to meet again at One of the Clock on Tuesday, the 17th December 1963.